# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 878 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ<br>(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15.12.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಶಾಲಾ ಶಿಕ್ಷಣ ಇಲಾಖೆಯಲ್ಲಿ 1967 ರಿಂದ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸದೇ ಇರುವುದರಿಂದ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಂಭೀರಾಗಿ ಪರಿಗಣಿಸಿದೆಯೇ; | ಹೌದು |
| (ಆ) | ಹಾಗಿದ್ದಲ್ಲಿ, ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ 2018ರಿಂದ ಇಲ್ಲಿಯವರೆಗೆ ಹಲವಾರು ಸಭೆಗಳು ನಡೆದಿದ್ದಾಗ್ಯೂ ಸಹ ಅಂತಿಮಗೊಳಿಸದಿರಲು ಕಾರಣಗಳೇನು; ಅಂತಿಮಗೊಳಿಸುವ ಕುರಿತು ಸರ್ಕಾರಕ್ಕಿರುವ ತೊಂದರೆಗಳೇನು; ಅವುಗಳನ್ನು ಸರಿಪಡಿಸಿ ಎಷ್ಟು ದಿನಗಳಲ್ಲಿ ಅಂತಿಮಗೊಳಿಸಲಾಗುವುದು; | ಶಾಲಾ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಣೆ ಮಾಡಲು ಗಂಭೀರವಾಗಿ ಪರಿಗಣಿಸಿದ್ದು, ವೃಂದ ನಿರ್ವಹಣಾ ಉಪಸಮಿತಿಯು ವೃಂದ ನಿಯಮಗಳ ಸಮಗ್ರ ಪರಿಷ್ಕರಣಾ ಕರಡನ್ನು ಅಂತಿಮಗೊಳಿಸಿದೆ.<br><br>ಶಾಲಾ ಶಿಕ್ಷಣ ಇಲಾಖೆಯಲ್ಲಿ 73 ವಿವಿಧ ವರ್ಗದ ವೃಂದಗಳಿದ್ದು, ಇವುಗಳಲ್ಲಿ ಒಟ್ಟು 2,57,895 ಮಂಜೂರಾದ ಹುದ್ದೆಗಳಿರುವುದರಿಂದ ಪರಿಷ್ಕರಣೆ ಕಾರ್ಯ ಕೈಗೊಳ್ಳಲು ಕಾಲಾವಕಾಶದ ಅವಶ್ಯವಿರುತ್ತದೆ.<br><br>ಪ್ರಸ್ತುತ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳ ಅಭಿಪ್ರಾಯಗಳನ್ವಯ ಕರಡು ನಿಯಮಗಳನ್ನು ಸಿದ್ಧಪಡಿಸಿ, ಅದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಿಂದ ಪರಿಶೋಧಿಸಿಕೊಂಡು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸಲಾಗುತ್ತಿದೆ. ಸದರಿ ಅನುಮೋದನೆ ಪಡೆದು, ಸಚಿವ ಸಂಪುಟದ ಮುಂದೆ ಕರಡು ನಿಯಮಗಳನ್ನು ಮಂಡಿಸಲು ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು. |
| (ಇ) | ಇಲಾಖೆಯಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡುವಾಗ ಹುದ್ದೆಗಳಿಗನುಗುಣವಾಗಿ | ಬೋಧಕೇತರ ವೃಂದದ ಹುದ್ದೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕ್ರಮ |

| | | |
|---|---|---|
| | ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವುದರೊಂದಿಗೆ ಸೇರ್ಪಡೆ ಮಾಡುವ ಮೂಲಕ ಸಮಯೋಚಿತವಾಗಿ ನೇಮಕಾತಿ ಮಾಡಲಾಗುತ್ತಿದ್ದು, ಬೋಧಕೇತರ ವೃಂದದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಣೆ ಮಾಡದಿರುವುದರಿಂದ ಅವರಿಗೆ ಅನ್ಯಾಯವಾಗುತ್ತಿರುವ ಹಿನ್ನೆಲೆಯಲ್ಲಿ ಬೋಧಕೇತರ ವೃಂದದ ಹುದ್ದೆಗಳಿಗೆ ತಾತ್ಕಾಲಿಕವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿ, ತದನಂತರ ಸಮಗ್ರ ತಿದ್ದುಪಡಿಗೆ ಸೇರ್ಪಡೆ ಮಾಡಿಕೊಳ್ಳುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು); | ವಹಿಸಲಾಗುತ್ತಿದ್ದು, ಅನ್ಯಾಯವಾಗಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.<br><br>ಆದಾಗ್ಯೂ ಎಲ್ಲಾ ಬೋಧಕೇತರ ವೃಂದದ ಹುದ್ದೆಗಳಿಗೆ ಜಾರಿಯಲ್ಲಿರುವ ನಿಯಮಗಳನ್ನು ಪರಿಷ್ಕರಣೆ ಮಾಡುವ ಕಾರ್ಯ ತೀವ್ರ ಪರಿಶೀಲನೆಯಲ್ಲಿದೆ. |
| (ಈ) | ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಹೊಸದಾಗಿ ಸೃಜನೆಯಾದ ಪ್ರಥಮ ದರ್ಜೆ ಲೆಕ್ಕಸಹಾಯಕ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಿಲ್ಲದಿರುವ ಕಾರಣ ಅವುಗಳ ನೇಮಕಾತಿ ಹಾಗೂ ಬಡ್ತಿ ನೀಡಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಕುರಿತು ಆರ್ಥಿಕ ಇಲಾಖೆ, ಸಿಆಸು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಿಂದ ಸಹಮತಿ ನೀಡಿರುವ ಪ್ರತಿಗಳನ್ನು ನೀಡುವುದು; | ಬಂದಿದೆ<br><br>ಆರ್ಥಿಕ ಇಲಾಖೆ, ಸಿಆಸು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳು ನೀಡಿರುವ ಸಹಮತಿಯನ್ನು ಅನುಬಂಧದಲ್ಲಿರಿಸಿದೆ. |
| (ಉ) | ಪ್ರಥಮ ದರ್ಜೆ ಲೆಕ್ಕಸಹಾಯಕ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ, ತದನಂತರ ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೇರ್ಪಡೆಗೊಳಿಸುವ ಕುರಿತು ಸರ್ಕಾರದ ನಿಲುವೇನು? (ಸಂಪೂರ್ಣ ಮಾಹಿತಿ ನೀಡುವುದು) | ಈಗಾಗಲೇ ಪ್ರಥಮ ದರ್ಜೆ ಲೆಕ್ಕಸಹಾಯಕ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಸದರಿ ನಿಯಮಗಳಿಗೆ ವೃಂದ ನಿರ್ವಹಣಾ ಉಪಸಮಿತಿಯು ದಿನಾಂಕ: 02.12.2025 ರಂದು ಅನುಮೋದಿಸಿರುತ್ತದೆ. ಪ್ರಸ್ತುತ ಸದರಿ ಅನುಮೋದನೆಯಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲು ಕ್ರಮವಹಿಸಲಾಗುತ್ತಿದೆ. |

ಇಪಿ 210 ಡಿಎಆರ್ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸಂಖ್ಯೆ:ಆಇ 440 ವೆಚ್ಚ-8/2025
EP 204 STB 2024 (P-1)

ಆರ್ಥಿಕ ಇಲಾಖೆ(ವೆಚ್ಚ-8)
ದಿನಾಂಕ:17-08-2025

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಪ್ರಸ್ತುತ, ಶಾಲಾ ಶಿಕ್ಷಣ ಇಲಾಖೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 36 ಮಾಹಿತಿ 2014, ದಿನಾಂಕ:26.08.2015ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತ ಕಚೇರಿಗಳಲ್ಲಿ ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರೆಂದು 204 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಸದರಿ 204 ಹುದ್ದೆಗಳ ಪೈಕಿ ಶಾಲಾ ಶಿಕ್ಷಣ ಇಲಾಖೆಯು ದ್ವಿತೀಯ ದರ್ಜೆ ಸಹಾಯಕರ ವೃಂದದಿಂದ ಪ್ರಥಮ ದರ್ಜೆ ಲೆಕ್ಕಸಹಾಯಕರ ವೃಂದದ ಹುದ್ದೆಗೆ ಮುಂಬಡ್ತಿ ನೀಡುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ:ಆಇ 304 ಎಸ್‌ಎಡಿ 2011, ದಿನಾಂಕ:30.10.2012 ಹಾಗೂ ಆಇ 216 ರಾಲೆಪ 2023, ದಿನಾಂಕ:15.09.2023ರಲ್ಲಿನ ಮಾರ್ಗಸೂಚಿಗಳಂತೆ ಕ್ರಮವಹಿಸಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಮಂಜೂರಾಗಿರುವ 204 ಲೆಕ್ಕಸಹಾಯಕರ ಹುದ್ದೆಗಳ ಪೈಕಿ ಶೇ.50 ರಷ್ಟು ಹುದ್ದೆಗಳು ಅಂದರೆ, 102 ಹುದ್ದೆಗಳು ಮೀರದಂತೆ ಶಾಲಾ ಶಿಕ್ಷಣ ಇಲಾಖೆಯಿಂದ ತುಂಬಲು ಕ್ರಮವಹಿಸುವಂತೆ ಈ ಮೂಲಕ ತಿಳಿಸಿದೆ.

[ಸರ್ಕಾರದ ಕಾರ್ಯದರ್ಶಿ (ಆ ಮತ್ತು ಸಂ),
ಆರ್ಥಿಕ ಇಲಾಖೆ ಇವರಿಂದ ಅನುಮೋದಿತ]

Digitally signed by
Prajith K M Nambiar
Date: 17-08-2025
21:18:03
(ಪ್ರಜೀತ್ ಕೆ.ಎಂ. ನಂಬಿಯಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವೆಚ್ಚ-7&8).

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

ಸಿಆಸುಇ 129 ಸೇನಿಡಿ 2025
EP/204/STB/2024

ಸಿಆಸುಇ (ಸೇವಾ ನಿಯಮಗಳು-ಡಿ)
ದಿನಾಂಕ: 23.06.2025

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ** ಸ್ವೀಕೃತ ವಾಗಿರುವ ಪ್ರಸ್ತಾವನೆಯು **ಶಾಲಾ ಶಿಕ್ಷಣ ಇಲಾಖೆಯಲ್ಲಿ** ಸೇವೆ ಸಲ್ಲಿಸುತ್ತಿರುವ **ದ್ವಿತೀಯ ದರ್ಜೆ ಸಹಾಯಕರು (SDA)** ಎಸ್.ಎ.ಎಸ್ **(SAS)** ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅರ್ಹರಾದ ನೌಕರರಿಗೆ **ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರ (FDAA)** ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ ಅಭಿಪ್ರಾಯ ಕೋರಲಾಗಿದೆ.

2. ಪರಿಶೀಲಿಸಲಾಗಿ ಇಲಾಖೆಯ **1967**ರ C&R ನಿಯಮಗಳಲ್ಲಿ **ಪ್ರಥಮ ದರ್ಜೆ ಲೆಕ್ಕ ಸಹಾಯಕ (FDAA)** ಎಂಬ ವೃಂದವು ಇರುವುದಿಲ್ಲ. ತದನಂತರ ದಿ **20.06.2015**ರ ಸರ್ಕಾರದ ಆದೇಶದಲ್ಲಿ ಒಟ್ಟು **204 FDAA** ಹುದ್ದೆಗಳನ್ನು **ಸೃಜಿಸಲಾಗಿದ್ದು**, ಸದರಿ ಹುದ್ದೆಗಳನ್ನು **ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ** ಮೂಲಕ ಭರ್ತಿ ಮಾಡಲು ಕಾರ್ಯಕಾರಿ ಆದೇಶ ಹೊರಡಿಸಲಾಗಿರುತ್ತದೆ.

3. ಆರ್ಥಿಕ ಇಲಾಖೆಯು ತನ್ನ ದಿ:**30.10.2012** ಮತ್ತು **15.09.2023**ರ ಆದೇಶಗಳಲ್ಲಿ ತಿಳಿಸಿರುವಂತೆ, ಶಾಲಾ ಶಿಕ್ಷಣ ಇಲಾಖೆಯ **ಪ್ರಥಮ ದರ್ಜೆ ಲೆಕ್ಕ ಸಹಾಯಕ** ಹುದ್ದೆಗಳನ್ನು **50:50** ರ ಅನುಪಾತದಲ್ಲಿ ಶಾಲಾ ಶಿಕ್ಷಣ ಇಲಾಖೆಯ **ದ್ವಿತೀಯ ದರ್ಜೆ ಸಹಾಯಕ** ಹುದ್ದೆಯಿಂದ **ಮುಂಬಡ್ತಿ ನೀಡುವ ಮೂಲಕ** ಮತ್ತು **ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಇಲಾಖೆಯ** ಸಮನಾಂತರ ವೃಂದದ ನೌಕರರನ್ನು **ನಿಯೋಜನೆ ಮೂಲಕ** ಭರ್ತಿ ಮಾಡಲು ನಿರ್ಣಯಿಸಿ ನೇಮಕಾತಿ ವಿಧಾನವನ್ನು ತಿದ್ದುಪಡಿಸಲು ಪ್ರಸ್ತಾಪಿಸಿದೆ.

4 . 2015 ರಲ್ಲಿ ಮಂಜೂರಾಗಿರುವ **ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರುಗಳ** ಯಾವ ಹುದ್ದೆಗಳಿಗೂ ಸಹ ಇದುವರೆಗೆ ಮುಂಬಡ್ತಿ ನೀಡಿಲ್ಲದ ಕಾರಣ ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇಲೆ ಯಾರೊಬ್ಬರೂ ಬಾರದೇ ಇರುವ ಕಾರಣ, ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರುಗಳ ಎಲ್ಲಾ ಹುದ್ದೆಗಳು ಹಾಗೆಯೇ ಖಾಲಿ ಉಳಿದಿರುತ್ತವೆ ಎಂದು ತಿಳಿಸುತ್ತಾ, ಪ್ರಸ್ತುತ ಇಲಾಖೆಯಲ್ಲಿ ಅಂದಾಜು 164 ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳು ಖಾಲಿಯಿದ್ದು, ಇಲಾಖೆಯ ಆಡಳಿತದ ಹಿತದೃಷ್ಟಿಯಿಂದ ಸದರಿ ಹುದ್ದೆಗಳನ್ನು ಭರ್ತಿ ಮಾಡುವುದು ಅಗತ್ಯವಾಗಿದ್ದು, ಈ ಎಲ್ಲಾ ವಾಸ್ತವಾಂಶಗಳ ಹಿನ್ನಲೆಯಲ್ಲಿ, ಶಾಲಾ ಶಿಕ್ಷಣ ಇಲಾಖೆಯಲ್ಲಿ **2015**ರಲ್ಲಿ ಹೊಸದಾಗಿ **ಸೃಜಿಸಲಾಗಿರುವ ಪ್ರಥಮ ದರ್ಜೆ ಲೆಕ್ಕ ಸಹಾಯಕ** ವೃಂದದ ಒಟ್ಟು ಹುದ್ದೆಗಳ ಪೈಕಿ **50%**ರಷ್ಟನ್ನು ಇಲಾಖೆಯ **ದ್ವಿತೀಯ ದರ್ಜೆ ಸಹಾಯಕರ** ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **SAS** (Subordinate Accounts Service) **ಪರೀಕ್ಷೆ ಪಾಸಾದ ಮತ್ತು ಸದರಿ ವೃಂದದಲ್ಲಿ ಕನಿಷ್ಟ 5 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ FDA ಅಥವಾ FDAA ಹುದ್ದೆಗೆ ಮುಂಬಡ್ತಿ ಹೊಂದುವ ಬಗ್ಗೆ ಬದಲಿಸಲಾಗದ (irrevocable) ಆಯ್ಕೆ ಪಡೆದು ಪ್ರಥಮ ದರ್ಜೆ ಲೆಕ್ಕ ಸಹಾಯಕ (FDAA) ಹುದ್ದೆಗೆ ಮುಂಬಡ್ತಿ ನೀಡುವ** ಮೂಲಕ ಹಾಗೂ ಇನ್ನುಳಿದ **50%**ರಷ್ಟು ಹುದ್ದೆಗಳನ್ನು ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಇಲಾಖೆಯ ಸಮನಾಂತರ ವೃಂದದ ನೌಕರರನ್ನು **ನಿಯೋಜನೆ** ಮಾಡುವ **ಮೂಲಕ** ಭರ್ತಿ ಮಾಡಲು ನೇಮಕಾತಿ ವಿಧಾನ ಮತ್ತು ಅರ್ಹತೆಯನ್ನು ನಿಗದಿಪಡಿಸುವ ತಿದ್ದುಪಡಿ ಪ್ರಸ್ತಾವನೆಯ ಕುರಿತು **ಸಿಆಸು ಇಲಾಖೆಯ** ಅಭಿಪ್ರಾಯ ಕೋರಿದೆ.

5. ಸಾರ್ವಜನಿಕ ಶಿಕ್ಷಣ ಇಲಾಖೆಯ ಪರಿಷ್ಕೃತ ಕರಡು ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಸ್ತಾವನೆಗೆ ದಿನಾಂಕ: 18.02.2025ರಂದು ಅಭಿಪ್ರಾಯವನ್ನು ನೀಡಲಾಗಿದ್ದು, ಅದರಲ್ಲಿ **ಪ್ರಥಮ ದರ್ಜೆ ಲೆಕ್ಕ ಸಹಾಯಕ (FDAA)** ಹುದ್ದೆಯ ಕುರಿತು ಪರಿಷ್ಕೃತ ಕರಡು ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಯಾವುದೇ ನಮೂದು ಇರುವುದಿಲ್ಲ.

6. ಮುಂದುವರೆದು, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 38 ಸೇನಿಇ 1996, ದಿನಾಂಕ: 01.08.1996ರಲ್ಲಿ ಹೊಸದಾಗಿ ಸೃಷ್ಟಿಸುವ ಹುದ್ದೆಗಳಿಗೆ ಹಾಗೂ ನೇಮಕಾತಿ ವಿಧಾನವನ್ನು ರೂಪಿಸದಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾತ್ರ ಕಾರ್ಯಕಾರಿ ಆದೇಶವನ್ನು ಹೊರಡಿಸಲು ಅವಕಾಶ ಕಲ್ಪಿಸಲಾಗಿದೆ.

ಆದರೆ, ಇಲಾಖೆಯಲ್ಲಿ ಪ್ರಥಮ ದರ್ಜೆ **ಲೆಕ್ಕ** ಸಹಾಯಕ **(FDAA)** ವೃಂದವು ಈಗಾಗಲೇ ಅಸ್ತಿತ್ವದಲ್ಲಿದ್ದು, ಈ ವೃಂದವನ್ನು ದಿನಾಂಕ: **20.06.2015ರ ಕಾರ್ಯಕಾರಿ** ಆದೇಶದಲ್ಲಿ ಸೃಜಿಸಿ **ನಿಯೋಜನೆ ಮೂಲಕ** ಭರ್ತಿ ಮಾಡಲು ನೇಮಕಾತಿ ವಿಧಾನವನ್ನು ಸಹ ನಿಗದಿಪಡಿಸಿರುವುದರಿಂದ, ಈಗಿರುವ ಕಾರ್ಯಕಾರಿ ಆದೇಶದಲ್ಲಿನ ನೇಮಕಾತಿ ವಿಧಾನವನ್ನು ತಿದ್ದುಪಡಿಮಾಡಿ ಮತ್ತೊಂದು ಕಾರ್ಯಕಾರಿ ಆದೇಶ ಹೊರಡಿಸಲು ಅವಕಾಶವಿರುವುದಿಲ್ಲ. ಬದಲಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಎಸ್ ಆರ್ ಡಿ 2004 ದಿನಾಂಕ:08.10.2004ರಲ್ಲಿನ ಮಾರ್ಗಸೂಚಿಗಳನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಕೈಗೊಳ್ಳಬೇಕಾಗಿರುತ್ತದೆಂದು ಆಡಳಿತ ಇಲಾಖೆಗೆ ತಿಳಿಸಲಾಗಿದೆ.

*(ಸರ್ಕಾರದ ಕಾರ್ಯದರ್ಶಿ, ಸಿಆಸುಇ*
*ಇವರಿಂದ ಅನುಮೋದಿತ)*

Digitally signed by
NAGARATHNA V PATIL
Date: 23-06-2025
16:56:30

(ನಾಗರತ್ನ ವಿ. ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವಾ ನಿಯಮಗಳು-2).

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**Note # 11**

ಸಂಖ್ಯೆ: ಸಂವ್ಯಶಾಇ 119 **ಅಶಾರ** 2025
EP/204/STB./2024 (E-1771165)

ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:05.06.2025

ಶಾಲಾ ಶಿಕ್ಷಣ ಇಲಾಖೆಯಲ್ಲಿನ ಲೆಕ್ಕಾಧೀಕ್ಷಕರು ಮತ್ತು ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರು ವೃಂದಗಳಿಗೆ ಕುರಿತ ನೇಮಕಾತಿ ವಿಧಾನವನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸುವ ಸಂಬಂಧ ಮೊದಲಿಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 304 ಎಸ್‌ಎಡಿ 2011, ದಿನಾಂಕ:30.10.2012 ಮತ್ತು ಆದೇಶ ಸಂಖ್ಯೆ: ಆಇ 216 ರಾಲೆಪ 2023, ದಿನಾಂಕ:15.09.2023, ಸಿ.ಆ.ಸು. ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 38 ಸೇನಿಇ 96, ದಿನಾಂಕ:01.08.1996 ಮತ್ತು ಸಿ.ಆ.ಸು. ಇಲಾಖೆಯ ಆದೇಶ ಸಂಖ್ಯೆ:ಸಿಆಸುಇ 97 ಎಸ್‌ಆರ್‌ಡಿ 2004ರನ್ವಯ ಆರ್ಥಿಕ ಇಲಾಖೆ ಮತ್ತು ಸಿ.ಆ.ಸು (ಸೇವಾ ನಿಯಮಗಳು) ಇಲಾಖೆಯ ಅಭಿಪ್ರಾಯ ಪಡೆದು ನಿಯಮಾನುಸಾರ ಕ್ರಮವಹಿಸಿ ಕರಡುನ್ನು ಪರಿಶೋಧನೆಗೆ ಈ ಇಲಾಖೆಗೆ ಕಳುಹಿಸುವಂತೆ ತಿಳಿಸಲಾಗಿದೆ.

(ಕಾರ್ಯದರ್ಶಿಯವರಿಂದ ಅನುಮೋದಿತ)

**(ಕುಸುಮ ಆರ್.ವಿ.)**
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಾಲಾ ಶಿಕ್ಷಣ ಇಲಾಖೆ.

**05/06/2025 04:24 PM**

**KUSUMA R.V**
**UNDER SECRETARY**

---





nerated from eOffice by MAMATHA RANI, EP-ADM-SO(MR), SECTION OFFICER, EDUCATION PRIMARY & SECONDARY SEC on 10/12/2025 01:16 PM